**ಹೊಳಲ್ಕೆರೆಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ**

**ಸಿ.ಸಿ. ನಂಃ 1043/2020**

| | |
|---|---|
| **ಫಿರ್ಯಾದುದಾರರು** | ಸರ್ಕಾರದ ಪರವಾಗಿ ಹೊಳಲ್ಕೆರೆ ಪೋಲೀಸರು |
| | – ವಿರುದ್ಧ – |
| ಆರೋಪಿತರು | 1. ರಾಮಾಂಜನೇಯ ತಂದೆ ಕೃಷ್ಣಪ್ಪ<br>30 ವರ್ಷ,<br>ವಾಸಃ ಜೆ.ಸಿ.ಬಡಾವಣೆ, ಹೊಳಲ್ಕೆರೆ ಟೌನ್ |
| | 2. ಸಾಕಮ್ಮ ಕೋಂ ಚಂದ್ರಪ್ಪ<br>40 ವರ್ಷ<br>ಚಿಲ್ಲರೆ ಅಂಗಡಿ ವ್ಯಾಪಾರಿ, ಗಂಗಸಮುದ್ರ ಗ್ರಾಮ<br>ಹೊಳಲ್ಕೆರೆ ತಾಲ್ಲೂಕು. |

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರಡಿಯಲ್ಲಿ ಆರೋಪಿತರ ಹೇಳಿಕೆ

ಪ್ರಶ್ನೆಃ1 - ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದಿಯಾ?

ಉತ್ತರಃ-

ಪ್ರಶ್ನೆ 2:- ಫ್ರಾಸಾ-1 ಗಿರೀಶ.ಪಿ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕ 08-11-2012 ರಂದು ಸಂಜೆ 4 ಮುಕ್ಕಾಲು ಗಂಟೆಗೆ ತಾನು ಠಾಣೆಯಲ್ಲಿರುವಾಗ ಎನ್ ಜಿ ಹಳ್ಳಿ ಗೇಟ್ ಬಳಿ ಯಾರೋ ಇಬ್ಬರು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಅಂತ ಬಾತ್ಮಿ ಬಂದ ಮೇರೆಗೆ ಠಾಣೆಗೆ ಚಾಸಾ2 ಮತ್ತು3 ರವರನ್ನು ಬರಮಾಡಿಕೊಂಡು ಸದರಿಯವರಿಗೆ ಮಾಹಿತಿ ತಿಳಿಸಿ ಚಾಸಾ2 ಮತ್ತು 3 ಸಿಬ್ಬಂದಿಗಳಾದ ಚಾಸಾ6 ಹಾಗೂ ಇತರೆಯವರನ್ನು ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋಗಿದ್ದು, ಅದೇ ದಿನ 5-30 ಗಂಟೆಗೆ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಜೀಪನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ ತಾವೆಲ್ಲರೂ ನಡೆದುಕೊಂಡು ಹೋಗುತ್ತಿದ್ದಾಗ ಒಬ್ಬ ಹೆಂಗಸು ಮತ್ತು ಒಬ್ಬ ಗಂಡಸು ರಟ್ಟಿನ ಬಾಕ್ಸನಲ್ಲಿ ಮದ್ಯವನ್ನು ಮಾರಾಟ ಮಾಡುತ್ತಿರುವುದು ಕಂಡು ಬಂತು ತಾವು ಹತ್ತಿರ

ಹೋದಾಗ ಅವರು ಓಡಿ ಹೋಗಿದ್ದು, ಸ್ಥಳದಲ್ಲಿ ಬಿಟ್ಟು ಹೋದ ಮದ್ಯವನ್ನು ಹಾಗೂ ರಟ್ಟಿನ ಬಾಕ್ಸವನ್ನು ಪರಿಶೀಲಿಸಿದಾಗ 180 ಎಂ ಎಲ್ ನ ಓಟಿ ಪೌಚಗಳು ಇರುವುದು ಕಂಡು ಬಂತು. ಓಡಿದವರ ಬಗ್ಗೆ ಸ್ಥಳದಲ್ಲಿ ಚಾಸಾ4 ಮತ್ತು 5ರವರನ್ನು ಕೇಳಲಾಗಿ ರಾಮಾಂಜನೇಯ ಮತ್ತು ಸಾಕಮ್ಮ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದರು ಅಂತ ಮತ್ತು ಪರವಾನಿಗೆ ಇಲ್ಲ ಅಂತ ತಿಳಿಸಿದರು. ಸಂಜೆ 6 ಗಂಟೆಯಿಂದ 7 ಗಂಟೆಯವರೆಗೆ ಮಹಜರ ಕ್ರಮ ಜರುಗಿಸಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ-

ಪ್ರಶ್ನೆ.3:- ಫ್ರಾಸಾ-4 ತಿಪ್ಪೇಶಿ.ಎಸ್.ಇ. ರವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ08.11.2012 ರಂದು ಸಂಜೆ 04-45 ಗಂಟೆಗೆ ತಾನು ಮತ್ತು ಚಾ.ಸಾ7 ರವರು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ.1 ರವರು ತಮ್ಮನ್ನು ಕರೆದು ಬಾತ್ಮಿದಾರರಿಂದ ಬಂದ ಕರೆಯ ಮೇರೆಗೆ ಹೊಳಲ್ಕೆರೆ ತಾಲ್ಲೂಕು, ಎನ್.ಜಿ.ಹಳ್ಳಿ ಗೇಟ್‌ನ ಬಳಿ ಯಾರೋ ಇಬ್ಬರೂ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆಂದು ತಿಳಿಸಿ ಅವರ ಮೇಲೆ ದಾಳಿ ಮಾಡಬೇಕೆಂದು ತಿಳಿಸಿದ್ದು, ಸಂಜೆ 4ಃ50 ಗಂಟೆಗೆ ಪಂಚರನ್ನು ಠಾಣೆಗೆ ಬರಮಾಡಿಕೊಂಡು ಚಾಸಾ.1 ರವರು ಅವರಿಗೆ ಸದರಿ ವಿಚಾರವನ್ನು ತಿಳಿಸಿದ್ದು ನಂತರ ತಾವುಗಳೆಲ್ಲರೂ ದಾಳಿ ಮಾಡಲು ಕೆಎ.16 ಜಿ.232 ರ ಠಾಣಾ ಜೀಪಿನಲ್ಲಿ ಸಂಜೆ 05 ಗಂಟೆಗೆ ಪೊಲೀಸ್ ಠಾಣೆಯನ್ನು ಬಿಟ್ಟು ಎನ್.ಜಿ.ಹಳ್ಳಿ ಗೇಟ್ ಬಳಿ ಜೀಪನ್ನು ನಿಲ್ಲಿಸಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದ ಸ್ಥಳದ ಹತ್ತಿರ ಕಾಲ ನಡಿಗೆಯಲ್ಲಿ ನಡೆದುಕೊಂಡು 05-30 ಗಂಟೆಗೆ ಹೋಗಿ ಮರೆಮಾಚಿ ನಿಂತು ನೋಡಲಾಗಿ ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸು ರಟ್ಟಿನ ಬಾಕ್ಸಿನಲ್ಲಿ ಮಧ್ಯವನ್ನು ಇಟ್ಟುಕೊಂಡು ಅಕ್ರಮವಾಗಿ ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು, ತಾವುಗಳು ಅವರನ್ನು

ಹಿಡಿಯಲು ಮುಂದಾದಾಗ ಸಮವಸ್ತ್ರದಲ್ಲಿದ್ದ ತಮ್ಮನ್ನು ನೋಡಿ ರಟ್ಟಿನ ಬಾಕ್ಸಳನ್ನು ಅಲ್ಲಿಯೇ ಬಿಟ್ಟು ಸಮೀಪದಲ್ಲಿದ್ದ ಜೋಳದ ಹೊಲಕ್ಕೆ ಓಡಿಹೋಗಿ ತಪ್ಪಿಸಿಕೊಂಡಿದ್ದು, ನಂತರ ತಾವುಗಳು ಅವರು ಮಧ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದ ಸ್ಥಳಕ್ಕೆ ಹಿಂದಿರುಗಿ ಬಂದು ಅಲ್ಲಿಯೇ ನಿಂತಿದ್ದ ಚಾಸಾ.4 ಮತ್ತು 5 ರವರನ್ನು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದವರ ಹೆಸರು ವಿಳಾಸವನ್ನು ಕೇಳಲಾಗಿ, ರಾಮಾಂಜನೇಯ ತಂದೆ ಕೃಷ್ಣಪ್ಪ, ಹೊಳಲ್ಕೆರೆ ಟೌನ್ ಮತ್ತು ಸಾಕಮ್ಮ ಗಂಡ ಚಂದ್ರಪ್ಪ, ಗಂಗಸಮುದ್ರ ಗ್ರಾಮ ಎಂದು ತಿಳಿಸಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ-

ಪ್ರಶ್ನೆ.4:- ಫ್ರಾಸಾ-4 ರವರು ಮುಂದುವರೆದ ತಮ್ಮ ನುಡಿ ಸಾಕ್ಷ್ಯದಲ್ಲಿ ನಂತರ ಸ್ಥಳದಲ್ಲಿದ್ದ ರಟ್ಟಿನ ಬಾಕ್ಸಗಳನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ ರಟ್ಟಿನ ಬಾಕ್ಸನಲ್ಲಿ 180 ಎಂ.ಎಲ್ ನ ಒಟ್ಟು 39 ಓಲ್ಡ ಟಾವರ್ನ್ ವಿಸ್ಕಿಯ ಪೌಚಗಳಿದ್ದು, ನಂತರ ಅವುಗಳಲ್ಲಿ ಒಂದನ್ನು ಎಫ್.ಎಸ್.ಎಲ್. ಗೆ ಕಳುಹಿಸುವ ಸಲುವಾಗಿ ಬಿಳಿ ಬಟ್ಟೆಯಲ್ಲಿ ಹಾಕಿಕೊಂಡು ಅದರ ಬಾಯನ್ನು ದಾರದಿಂದ ಕಟ್ಟಿ ಪಿ.ಆರ್.ಓ. ಎಂಬ ಇಂಗ್ಲೀಷ್ ಅಕ್ಷರಗಳಿಂದ ಸೀಲ್ ಮಾಡಿ ಪಂಚನಾಮೆಯನ್ನು ಸಂಜೆ 06 ರಿಂದ 07 ಗಂಟೆಯವರೆಗೆ ಪಂಚರ ಸಮಕ್ಷಮ ಜರುಗಿಸಿದ್ದು, ಸದರಿ ಮಧ್ಯದ ಪೌಚುಗಳ ಅಂದಾಜು ಬೆಲೆ 1,950 ರೂಗಳಾಗಿದ್ದು, ಸದರಿ ಪಂಚನಾಮೆಗೆ ತನ್ನ ಸಹಿಯನ್ನು ಮಾಡಿದ್ದು, ನಂತರ ಪಂಚಾನಾಮೆ ಮತ್ತು ಮಾಲನ್ನು ಠಾಣೆಗೆ ತಂದು ಹಾಜರುಪಡಿಸಿದ್ದು, ದಿಃ 09.11.2012 ರಂದು ಚಾ.ಸಾ1 ರವರ ಮುಂದೆ ಹೇಳಿಕೆ ನೀಡಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ-

ಪ್ರಶ್ನೆ.5:- ಫ್ರಾಸಾ-5 ಕೃಷ್ಣಪ್ಪ ಲಕ್ಕಿ ಕೋನಿ ರವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕ 08/11/2012 ರಂದು ಸಂಜೆ 4-45 ಗಂಟೆ ಚಾಸಾ-1 ರವರು ತನ್ನನ್ನು ಕರೆದು ಬಾತ್ಮಿದಾರರಿಂದ ಎಂ.ಜಿ.ಹಳ್ಳಿ ಗೇಟ್ ಬಳಿ ಯಾರೋ ಇಬ್ಬರು ಅಕ್ರಮಾಗಿ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಸಾರ್ವಜನಿಕರಿಗೆ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತವಾಗಿ ಮಾಹಿತಿ ಬಂದಿದ್ದು, ದಾಳಿ ಮಾಡಬೇಕೆಂದು ತನಗೆ ಮತ್ತು ಚಾಸಾ-6 ರವರಿಗೆ ತಿಳಿಸಿರುತ್ತಾರೆ, ನಂತರ ಚಾಸಾ-1 ರವರು ಸಂಜೆ 4-50 ಗಂಟೆಗೆ ಪಂಚರಾದ ಚಾಸಾ-2 ಮತ್ತು ಚಾಸಾ-3 ರವರನ್ನು ಬಡಿಮಾಡಿಕೊಂಡು ಅವರಿಗೆ ಸದರಿ ಮಾಹಿತಿಯನ್ನು ತಿಳಿಸಿದ್ದು, ನಂತರ ಅವರಿಗೆ ಪಂಚರಾಗಿ ಸಹಕರಿಸಿ ಎಂದು ಕೋರಿದ ಮೇರೆಗೆ ಅವರುಗಳು ಒಪ್ಪಿದ್ದು, ತಾವು ಅವರು ಚಾಸಾ-1 ರವರ ಜೊತೆ ಸುಮಾರು ಸಂಜೆ 5-00 ಇಲಾಖಾ ಜೀಪಿನಲ್ಲಿ ಠಾಣೆಯಿಂದ ಹೊರಟು ಘಟನಾ ಸ್ಥಳಕ್ಕೆ 5-30 ಗಂಟೆಗೆ ಎನ್.ಜಿ.ಹಳ್ಳಿ ಗೇಟ್‌ಗೆ ಹೋಗಿ ಸ್ವಲ್ಪ ದೂರದಲ್ಲಿ ಜೀಪನ್ನು ನಿಲ್ಲಿಸಿ ಎಲ್ಲರೂ ಕೆಳಗೆ ಇಳಿದು ನಡೆದುಕೊಂಡು ಘಟನಾ ಸ್ಥಳಕ್ಕೆ ಹೋಗಿ ಮರೆಮಾಚಿ ನಿಂತು ನೋಡಲಾಗಿ ಅರೋಪಿತರು ಎರಡು ರಟ್ಟಿನ ಬಾಕ್ಸ ಗಳನ್ನು ಇಟ್ಟುಕೊಂಡು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವುದು ಕಂಡಬಂದಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ-

ಪ್ರಶ್ನೆ.6:- ಫ್ರಾಸಾ-5 ರವರು ಮುಂದುವರೆದ ತಮ್ಮ ನುಡಿ ಸಾಕ್ಷ್ಯದಲ್ಲಿ ಆರೋಪಿತರು ಸಮವಸ್ತ್ರದಲ್ಲಿದ್ದ ತಮ್ಮನ್ನು ನೋಡಿ ಓಡಿ ಹೋಗಿದ್ದು, ತಾವು ಅವರನ್ನು ಬೆನ್ನತ್ತಿ ಹಿಡಿಯಲು ಮುಂದಾದಾಗ ಅಲ್ಲಿಯೇ ಇದ್ದ ಜೋಳದ ಹೊಲದಲ್ಲಿ ಹೋಗಿ ತಪ್ಪಿಸಿಕೊಂಡಿದ್ದು, ನಂತರ ತಾವು ಘಟನಾ ಸ್ಥಳಕ್ಕೆ ಬಂದು ಅಲ್ಲಿಯೇ ನಿಂತಿದ್ದ ಚಾಸಾ-5 ರವರನ್ನು ಓಡಿ ಹೋದ ಆರೋಪಿತರ ಹೆಸರು ಮತ್ತು ವಿಳಾಸ ಕೇಳಲಾಗಿ ರಾಮಾಂಜನೇಯ ಮತ್ತು ಸಾಕಮ್ಮ ಎಂದು ತಿಳಿಸಿದ್ದು, ಅವರನ್ನು

ವಿಚಾರಿಸಲಾಗಿದ್ದು, ಆರೋಪಿತರು ಸರ್ಕಾರದ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಮದ್ಯ ಮಾರಾಟ ಮಾಡುವುದನ್ನು ತಿಳಿಸಿದ ಮೇರೆಗೆ ನಂತರ ತಾವುಗಳು ಸ್ಥಳದಲ್ಲಿದ್ದ ರಟ್ಟಿನ ಬಾಕ್ಸ್ ಗಳನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ ಅದರಲ್ಲಿ 180 ಎಂ.ಎಲ್.ನ 39 ಓಲ್ಡ್ ಟವರಿನ್ ವಿಸ್ಕಿ ಪೌಚುಗಳಿದ್ದು ಅವುಗಳ ಬೆಲೆ ರೂ.1,950/- ರ ಗಳಾಬಹದು ಎಂದು ಅಭಿಪ್ರಾಯಪಟ್ಟಿದ್ದು, ನಂತರ ಮದ್ಯದ ಪೌಚುಗಳಲ್ಲಿ ತಲಾ ಒಂದನ್ನು ಎಫ್.ಎಸ್.ಎಲ್ ಗೆ ಕಳುಹಿಸುವ ಸಲುವಾಗಿ ಅದೇ ರಟ್ಟಿನ ಬಾಕ್ಸ್ ನಲ್ಲಿ ಹಾಕಿಕೊಂಡು ಅದರ ಬಾಯನ್ನು ದಾರದಿಂದಕಟ್ಟಿ ಪಿ.ಆರ್.ಓ ಎಂಬ ಇಂಗ್ಲೀಷ್ ಅಕ್ಷಗಳಿಂದ ಸೀಲ್ ಮಾಡಿ ಪಂಚನಾಮೆಯನ್ನು ಬೆಳಿಗ್ಗೆ 6-00 ರಿಂದ 7-00 ರವರೆಗೆ ಪಂಚರ ಸಮಕ್ಷಮ ಜರುಗಿಸಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ-

ಪ್ರಶ್ನೆಃ7:- ನಿಮ್ಮ ಪರವಾಗಿ ಯಾವುದಾದರು ಸಾಕ್ಷಿಗಳನ್ನು ವಿಚಾರ ಮಾಡಿಸುವಿರಾ ?

ಉತ್ತರ:-

ಪ್ರಶ್ನೆಃ 8:- ಮತ್ತೇನಾದರೂ ಹೇಳುವಿರಾ ?

ಉತ್ತರ:-

(ಸದರಿ ಹೇಳಿಕೆಯನ್ನು ಆರೋಪಿತರಿಗೆ ಓದಿ ತಿಳಿಸಿ ಹೇಳಿ ಅವರಿಂದ ಬಂದ ಉತ್ತರವನ್ನು ನನ್ನ ಸಮಕ್ಷಮದಲ್ಲಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು ಎಂದು ಪ್ರಮಾಣೀಕರಿಸಲಾಗಿದೆ )

ದಿನಾಂಕಃ 19/08/2024

ಅಪರ ಸಿವಿಲ್ ಮತ್ತು ಪ್ರ ದ ನ್ಯಾಯಿಕ
ದಂಡಾಧಿಕಾರಿಗಳು, ಹೊಳಲ್ಕೆರೆ.